ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ, ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರ ಪರವಾಗಿ 1990ನೇ ಇಸವಿಯ ಕರ್ನಾಟಕ ಹಿಡುವಳಿಗಳ ತುಂಡೀಕರಣ ನಿರೋಧ ಮತ್ತು ಸಂಯೋಜನಾ (ನಿರಸನ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ತಮ್ಮ ಗಮನಕ್ಕೆ ಒಂದು ವಿಚಾರ ತರುತ್ತಿದ್ದೇನೆ. ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುತ್ ನಿಲುಗಡೆ ಬಗ್ಗೆ ತಮ್ಮನ್ನು ಭೇಟಿ ಮಾಡಿ ತಮ್ಮ ಹತ್ತಿರ ಮಾತನಾಡಿದ್ದೇನೆ. ಈ ರಾಜ್ಯದ ಗ್ರಾಮಾಂತ ಪ್ರದೇಶದ ಜನತೆಯ ಮೇರೆ ವಿದ್ಯಾತ್ ಸರಬರಾಜು ಬಗ್ಗೆ ದೊಡ್ಡ ಗದಾಪ್ರಹಾರವನ್ನು ಮಾಡಿದ್ದಾರೆ. ವಿದ್ಯುಚ್ಛಕ್ತಿ ಎಲ್ಲಿ ಯಾವಾಗ ಹೇಗೆ ನಿಲ್ಲಿಸಬೇಕು? ಗ್ರಾಮ ಜನತೆಯ ಮೇಲೆ.....

ಅಧ್ಯಕ್ಷರು : ಒಂದು ನಿಮಿಷ, ಮಾನ್ಯ ಚಂದ್ರೇಗೌಡರು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದಾರೆ. ಅವರು ಅದರ ಬಗ್ಗೆ ಹೇಳಲಿ.

ಪದವಿಪೂರ್ಣ ಶಿಕ್ಷಣದ ಪರೀಕ್ಷೆಗೆ ಸಂಬಂಧಪಟ್ಟ ಪ್ರಶ್ನೆ ಪತ್ರಿಕೆಗಳು ಬಯಲಾಗಿರುವ ಬಗ್ಗೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋದ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನನಗೆ ಅವಕಾಶ ಕೊಟ್ಟರೆ ನಿಲುವಳಿ ಸೂಚನೆಯನ್ನು ಏತಕ್ಕೆ ಕಳುಹಿಸಿಕೊಟ್ಟಿದ್ದೇನೆ ಎಂಬುದನ್ನು ಹೇಳುತ್ತೇನೆ. ಪದವಿಪೂರ್ವ ಶಿಕ್ಷಣ ಬಹಳ ಪ್ರಾಮುಖ್ಯವಾದಂಥ ಒಂದು ವ್ಯವಸ್ಥೆ. ಅಲ್ಲಿಂದ ಮುಂದಕ್ಕೆ ವಿದ್ಯಾರ್ಥಿಗಳು ತಮ್ಮ ವಿದ್ಯಾಕ್ಷೇತ್ರಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಮುಂದೆ ಇಂಜಿನಿಯರಿಂಗ್ ಕಾಲೇಜಿಗೆ ಹೋಗುವವರು ಮೆಡಿಕಲ್ ಕಾಲೇಜಿಗೆ ಹೋಗುವವರು ಇರುತ್ತಾರೆ. ಆದ್ದರಿಂದ ಪದವಿಪೂರ್ವ ಶಿಕ್ಷಣ ಅತಿ ಮುಖ್ಯವಾದುದು. ಆದರೆ ಬಹಳ ಕಾಲದಿಂದ ಅಲ್ಲಿ ಅವ್ಯವಹಾರ ನಡೆಯುತ್ತಿದೆ ಎಂಬುದು ಅನೇಕ ಸಾರಿ ಈ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಪ್ರಶ್ನೆಪತ್ರಿಕೆಗಳು ಪ್ರಸಿದ್ಧಿಯಾಗತಕ್ಕದ್ದನ್ನು ಕೇಳಿದ್ದೇವೆ. ಈಗ ಉತ್ತರ ಪತ್ರಿಕೆಗಳು ಕೂಡ ಬೀದಿಯಲ್ಲಿವೆ ಎಂಬ ಸುದ್ದಿ ಬಹಳಷ್ಟು ಪ್ರಚಲಿತವಾಗಿ ಹಬ್ಬಿದೆ. ಆದ್ದರಿಂದ, ಒಂದು ವೇಳೆ ಇಂಥ ಉತ್ತರ ಪತ್ರಿಕೆಗಳು ಬೀದಿಯಲ್ಲಿ ಚಾಲನೆಗೆ ಹೋಗಿದ್ದರೆ ಹಾಗೆ ಹೋಗುವುದಕ್ಕೆ ಏನಾದರೂ ಅವಕಾಶ ಇದೆಯೇ? ಉತ್ತರ ಪತ್ರಿಕೆಗಳ ಮೌಲ್ಯ ಮಾಪನದ ವ್ಯವಸ್ಥೆ ಯಾವರೀತಿ ರಾಜ್ಯದಲ್ಲಿ ನಡೆಯುತ್ತದೆ? ಉತ್ತರ ಪತ್ರಿಕೆಯ ಮೌಲ್ಯ ಮಾಪನ ಆಗತಕ್ಕ ಕೇಂದ್ರೀಕೃತ ವ್ಯವಸ್ಥೆ ಇದೆ ಎಂದು ನಾವು ಕೇಳಿದ್ದೇವೆ. ಇದು ಏನಾದರು ವಿಕೇಂದ್ರಿಕೃತ ವ್ಯವಸ್ಥೆಯಲ್ಲಿ ಜಿಲ್ಲಾಮಟ್ಟದಲ್ಲಿ ಆಗುತ್ತದೆಯೇ? ಮೊನ್ನೆತಾನೆ ಸೆಪ್ಟೆಂಬರ್‌ನಲ್ಲಿ ಪರೀಕ್ಷೆ ಮುಗಿದಿದೆ. ಇದರ ಮೌಲ್ಯಮಾಪನ ಆಗತಕ್ಕ ಈ ಒಂದು ಸಂದರ್ಭದಲ್ಲಿ ವಿದ್ಯಾರ್ಥಿಗಳ ಬದುಕಿನ ಜೊತೆಗೆ ಚೆಲ್ಲಾಟ ಆಡತಕ್ಕ ಕೆಲಸ ಸರ್ಕಾರದಿಂದ ಆದರೆ ಇದನ್ನು ಸರಿಪಡಿಸಬೇಕಾದ್ದು ಹೇಗೆ ಎಂಬ ಪರಿಸ್ಥಿತಿ ನಮ್ಮ ರಾಜ್ಯದಲ್ಲಿ ಉದ್ಭವವಾಗಿದೆ. ಆದ್ದರಿಂದ ಈ ವಿಚಾರವನ್ನು ನಾನು ಬಹಳ ಪ್ರಾಮುಖ್ಯವಾದ ವಿಚಾರ, ಲಕ್ಷಾಂತರ ಜನ ವಿದ್ಯಾರ್ಥಿಗಳ ಆಗುಹೋಗುಗಳ ಬಗ್ಗೆ ಪರಿಣಾಮ ಬೀರತಕ್ಕ ಪ್ರಶ್ನೆ ಎಂದು ಹೇಳುತ್ತಿದ್ದೇನೆ. ಆದ್ದರಿಂದ ತಾವು ನನಗೆ ಅವಕಾಶ ಕೊಟ್ಟರೆ ಅದನ್ನು ಪೂರ್ಣವಾಗಿ ವಿವರವಾಗಿ ಚರ್ಚೆ ಮಾಡುವುದಕ್ಕೆ ನಾನು ತಮ್ಮ ಅನುಮತಿ ಕೇಳುತ್ತೇನೆ. ಈ